ಶ್ರೀ ಟಿ. ಜಿ. ತಿಮ್ಮೇಗೌಡ.— 4-5 ವರ್ಷಗಳ ಹಿಂದೆ 300 ಮಂದಿ ವಿದ್ಯಾರ್ಥಿಗಳ ಸಂಖ್ಯೆ ಇದ್ದುದು ಈಗ 600 ಕ್ಕೆ ಜಾಸ್ತಿಯಾಗಿರುವುದು ಗಮನಕ್ಕೆ ಬಂದಿದೆಯೇ ?

Sri A. G. RAMACHANDRA RAO.— Yes, Sir.

ಶ್ರೀ ಟಿ. ಜಿ. ತಿಮ್ಮೇಗೌಡ.— ಇಷ್ಟಾದರೂ ಸಹ ಅದನ್ನು ಬದಲಾವಣೆಗೊಳಿಸದಿರುವುದಕ್ಕೆ ಕಾರಣ ವೇನು ?

Sri A. G. RAMACHANDRA RAO.— The matter is receiving attention. I cannot say why it was not taken up previously.

ಶ್ರೀ ಟಿ. ಜಿ. ತಿಮ್ಮೇಗೌಡ.— ಈ ಬಗ್ಗೆ ಅಂದಾಜು ಎಷ್ಟಕ್ಕೆ ತಯಾರಾಗಿದೆ ?

Sri A. G. RAMACHANDRA RAO.— Rs. 34,000.

ಶ್ರೀ ಟಿ. ಜಿ. ತಿಮ್ಮೇಗೌಡ.— ಹಾಗಾದರೆ ಬರುವ ವರ್ಷವಾದರೂ ಈ ಕೆಲಸ ಪ್ರಾರಂಭಿಸುತ್ತೀರಾ ?

Sri A. G. RAMACHANDRA RAO.— It has gone to the signature of the Superintending Engineer.

Mr. SPEAKER.—The next two Questions Nos. 958 and 959 may be taken up together.

Bangalore Woollen, Cotton and Silk Mills (Provision of amenities to workers.)

Q.— 958. Sri D. VENKATESH (Gandhinagar).—

Will the Government be pleased to state :—

whether the Management of the Bangalore Woollen, Cotton and Silk Mills Company, Limited, has complied with the requirements of canteen as contemplated under Section 46 of the Factories Act LXIII of 1948 and the rules framed thereunder ?

A.— Sri A. G. RAMACHANDRA RAO (Minister for Law and Education).—

The Management is maintaining a canteen, but it does not satisfy the requirements of Section 46 of the Factories Act, 1948 and the rules framed thereunder. This is due to want of space for constructing a canteen according to requirements of law.

Q.—959. Sri D. VENKATESH (Gandhinagar).—

Will the Government be pleased to state :—

whether they are aware that the Management of the Bangalore Woollen, Cotton and Silk Mills Company, Ltd,. has ignored completely the implementation of Section 47 regarding shelters, rest rooms and lunch rooms and the rules framed thereunder ?

A.—Sri A. G. RAMACHANDRA RAO (Minister for Law and Education).—

Shelters and rest rooms have not been provided by the Management for want of accommodation. They have assured that as soon as the site is granted to them for which they have deposited Rs. 67,000, they would provide shelters, rest rooms, etc., according to the prescribed standard.

So far as provision of lunch room is concerned, they are at present using a portion of the Dining Hall attached to the canteen as a lunch room.

Sri D. VENKATESH.—May I know whether there is any provision for protecting the interests of employers if they do not comply with the requirements of section 46 of the Factories Act ?

Sri A. G. RAMACHANDRA RAO.— Unless he gives reasonable cause, I do not think there is any other protection.

Sri D. VENKATESH.—It is stated in the answer 'due to want of space for constructing a canteen according to requirements of law.' Is such excuse provided for in the Act ?

Sri A. G. RAMACHANDRA RAO.— It is no excuse. If what is said is true, and I believe it is true, it is a reasonable cause and it requires time.

Sri D. VENKATESH.—May I know whether the Government are aware that the Management have got constructed motor shed and other amenities required for them, inside the premises ?

Sri A. G. RAMACHANDRA RAO.— I am not aware of it.

Sri D. VENKATESH.—May I know whether the Corporation of Bangalore have already granted a site for the construction of canteen by the Management and whether the Management has applied for it ?

Mr. SPEAKER.—There is the answer. They have deposited Rs. 67,000.

Sri D. VENKATESH.—I want to know how it is stated that they have deposited Rs. 67,000. On what information the Government say that they have deposited that amount ?

Sri A. G. RAMACHANDRA RAO.—They had deposited and I learn that subsequently they withdrew and whether they have redeposited again I am not aware.

Sri D. VENKATESH.—May I tell you that they have not redeposited and will the Government take necessary action to see that the conditions referred to in the Factories Act are fulfilled ?

Sri A. G. RAMACHANDRA RAO.—Yes. I will see that the building is proceeded with without asking for the redeposit of the amount.

First Grade College, Tumkur (Accommodation).

Q.—1031. Sri T. N. MUDALAGIRI GOWDA (Kunigal).—

Will the Government be pleased to state :—

(*a*) when the foundation stone was laid by His Highness the Maharaja to construct a building for the use of the First Grade College at Tumkur ;

(*b*) whether the present building where the College is running does not belong to the District Board ;

(*c*) whether the District Board has given this building permanently ;

(*d*) the rent that is being paid ;

(*e*) the reasons for not commencing the work of construction of the College building ?

A.—Sri A. G. RAMACHANDRA RAO (Minister for Law and Education).—

(*a*) In July 1949.
(*b*) Yes.
(*c*) No.
(*d*) Rs. 250 per month.
(*e*) Want of funds.

ಶ್ರೀ ಟಿ. ಎಚ್. ಮೂಡಲಗಿರಿ ಗೌಡ.—ಈ ಕಾಲೇಜಿಗೆ ಅಸ್ತಿಭಾರ ಹಾಕುವಾಗ ಎಷ್ಟು ಹಣವನ್ನು provide ಮಾಡಿದ್ದಿರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಟಿ. ಎಚ್. ಮೂಡಲಗಿರಿ ಗೌಡ.—1949 ರಿಂದ ಯಾವ್ಯಾವ ಕಾಲೇಜಿಗೆ ಎಷ್ಟೆಷ್ಟು ಹಣವನ್ನು ಈ ಬಗ್ಗೆ ಒದಗಿಸಿದ್ದೀರಿ ?

Sri A. G. RAMACHANDRA RAO.—That does not arise.

ಶ್ರೀ ಟಿ. ಎಚ್. ಮೂಡಲಗಿರಿ ಗೌಡ.—ಪಂಚ ವಾರ್ಷಿಕ ಯೋಜನೆಯಲ್ಲಿ ಈ ವರ್ಷ ಎಷ್ಟು ಹಣವನ್ನು ಕಟ್ಟಡಕ್ಕಾಗಿ ಉಪಯೋಗಿಸಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದಕ್ಕೆ provide ಮಾಡಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿ ಗೌಡ.—ಇದಕ್ಕೇಕೆ provide ಮಾಡಿಲ್ಲ ?

ಶ್ರೀ ಎ. ಜಿ. ರಾಮಚಂದ್ರರಾವ್.—ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್ ತೆಗೆದುಕೊಂಡು ಉಪಯೋಗಿಸುತ್ತಿರುವುದರಿಂದ provide ಮಾಡಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿ ಗೌಡ.—ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್ ತಮಗೇ ಬೇಕು, ಇನ್ನು ಮುಂದೆ ಅಲ್ಲಿ ನಡೆಸುವುದಕ್ಕೆ ಆಗುವುದಿಲ್ಲವೆಂಬ ಬಗ್ಗೆ correspondence ನಡೆಯುತ್ತಿರುವುದು ಗೊತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಗೊತ್ತಿದೆ.

ಶ್ರೀ ಟಿ. ಎಚ್. ಮೂಡಲಗಿರಿ ಗೌಡ.—ಇದಕ್ಕೆ ತಾವು ಏನು ಅಭಿಪ್ರಾಯ ಪಡುತ್ತೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ರೀತಿ ಒತ್ತಾಯಪಡಿಸುವುದು ನ್ಯಾಯವಲ್ಲ, ಸೂಕ್ತವೂ ಅಲ್ಲ. ಕಾಲೇಜು ಪ್ರಾರಂಭಿಸುವಾಗ ಬೇರೆ ಬಿಲ್ಡಿಂಗ್ ಕಟ್ಟಿಡ ಕಟ್ಟುವವರೆಗೆ ಇಲ್ಲ ಅವಕಾಶ ಕೊಡುವುದಾಗಿ ಅವರು ಬರೆದು ಕೊಟ್ಟಿರುತ್ತಾರೆ. ಆದಕಾರಣ ಅವರು ಜಾಗ್ರತೆ ನಿಮ್ಮ ಕಟ್ಟಡವನ್ನು ಕಟ್ಟಿಕೊಳ್ಳಿ ಎಂದು ಹೇಳಬಹುದೇ ಹೊರತು ಒತ್ತಾಯಮಾಡುವುದು ಸೂಕ್ತವಲ್ಲ.

ಶ್ರೀ ಟಿ. ಎಚ್. ಮೂಡಲಗಿರಿ ಗೌಡ.—ಡಿಸ್ಟ್ರಿಕ್ಟ್ ಬೋರ್ಡ್ ಆಫೀಸು ನಡೆಸುವುದಕ್ಕೆ ಸಾಕಷ್ಟು ಸ್ಥಳಾವಕಾಶವಿಲ್ಲದೆ ತೊಂದರೆಯಾಗಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದನ್ನೆಲ್ಲಾ ಗಮನದಲ್ಲಟ್ಟುಕೊಂಡೇ ಸಲಹೆ ಕೊಟ್ಟಿರುವುದು.

ಶ್ರೀ ಟಿ. ಎಚ್. ಮೂಡಲಗಿರಿ ಗೌಡ.—ಹಾಗಾದರೆ ಡಿಸ್ಟ್ರಿಕ್ಟ್ ಬೋರ್ಡ್ ಆಫೀಸು ನಡೆಸುವ ಅಗತ್ಯ ವಿಲ್ಲವೇ ?

Sri A. G. RAMACHANDRA RAO.—Does not arise.

ಶ್ರೀ ಟಿ. ಎಚ್. ಮೂಡಲಗಿರಿ ಗೌಡ.—ಈ ವರ್ಷ ಪಾದರೂ ಸಾಕಷ್ಟು ಹಣವನ್ನೊದಗಿಸಿ ಕಟ್ಟಡವನ್ನು ಪ್ರಾರಂಭಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಯೋಚಿಸುತ್ತೇವೆ.

ಶ್ರೀ ವಿ. ವೆಂಕಟಪ್ಪ.—ಎಸ್ಟಿಮೇಟು, ಪ್ಲಾನು ತಯಾರು ಮಾಡದೇ ಫೌಂಡೇಷನ್ ಹಾಕುವ ಪದ್ಧತಿ ಇದೆಯೋ ?

(No answer)

ಶ್ರೀ ಬಿ. ಸಿ. ನಂಜುಂಡಯ್ಯ.—ತುಮಕೂರು ಫಸ್ಟ್ ಗ್ರೇಡ್ ಕಾಲೇಜು ಕಟ್ಟಡಕ್ಕೆ ಯೂನಿವರ್ಸಿಟಿಯವರು ಒಂದು ಲಕ್ಷ ರೂಪಾಯಿಗೆ ಮೇಲ್ಪಟ್ಟು ಹಣ ಖರ್ಚು ಮಾಡಿ ಉತ್ತಮಪಡಿಸಿರುವುದು ಸರ್ಕಾರದವರಿಗೆ ಗೊತ್ತೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಷ್ಟು ಹಣ ಖರ್ಚು ಮಾಡಿದ್ದಾರೋ ಗೊತ್ತಿಲ್ಲ.